ಇವತ್ತೇನಂಥ ಬೇಸರ... ಬಾ... ಬಾ...'

'ಬೇಡ ಮೀರಾ ನನಗೆ. ಪ್ಲೀಸ್ ಲೀವ್ ಮಿ ಅಲೋನ್...' ಮೀರಾ ಹತ್ತಿರ ಸರಿದು ಅವಳ ಹಣೆಯನ್ನು ಸ್ಪರ್ಶಿಸುತ್ತ 'ವಾಟ್ ಹ್ಯಾಪಂಡ್ ಟು ಯು... ಜ್ವರಗಿರ ಬಂದಿಲ್ಲ ತಾನೆ?' ಎಂದಳು.

'ಏನೂ ಆಗಿಲ್ಲವೇ ಮಾರಾಯ್ತಿ. ಟೀ ಬೇಡಾಂದೆ ಅಷ್ಟೇ...' ಅವಳ ಸ್ವರದಲ್ಲಿ ಬೇಸರ ತಾನೇ ತಾನಾಗಿತ್ತು. ಮೀರಾ ಹೊರಟುಹೋದಳು.

ಆಫೀಸಿನ ಊಟದ ಬಿಡುವಿನ ಸಮಯ. ಎಲ್ಲ ಕುರ್ಚಿಗಳೂ ಖಾಲಿಯಾಗಿದ್ದವು. ಶಾಂತತೆ ಅವಳ ಚಿತ್ತಕ್ಕೆ ತಂಪೆರೆಯಿತು. ಫ್ಯಾನಿನ ಗಾಳಿಯ ಕ್ಷೀಣ ಸಪ್ಪಳ ಬಿಟ್ಟರೆ ಉಳಿದದ್ದೆಲ್ಲ ಮೌನ.

ಭಾರವಾದ ಹೆಜ್ಜೆಗಳನ್ನಿಡುತ್ತ ರಸ್ತೆಗುಂಟ ಸಾಗಿದ್ದಳು ಕವಿತಾ. 'ಹಲೋ' ಎಂದ ದನಿಯೊಂದಿಗೆ ಅವಳ ಪಕ್ಕದಲ್ಲೇ ಸರಿದು ಬಂದು ನಿಂತ 'ಇಂಪಾಲಾ'ದ ಕಿಟಕಿಯಲ್ಲಿ ತಲೆಹಾಕಿದವನ ಮುಖ ಕಂಡು ತಡೆದು ನಿಂತಳು. ತಾನು ಕೆಲಸ ಮಾಡುವ ಬ್ಯಾಂಕಿನ ಮ್ಯಾನೇಜರ್ ಸಂತೋಷ. ಮುಖದಲ್ಲಿ ನಗು ಎಳೆದು ತಂದು ಕ್ಷೀಣ ದನಿಯಲ್ಲಿ 'ಹಲೋ ಸರ್' ಎಂದು ಮಾರುಲಿದಳು.

'ಯಾಕೆ ನಡೆದೇ ಹೊರಟಿದ್ದೀರಿ, ಬಸ್ ತಪ್ಪಿ ಹೋಯ್ತಾ? ಬನ್ನಿ ನಾನೂ ಆ ಕಡೆಗೆಯೇ ಹೊರಟಿದ್ದೇನೆ. ಬನ್ನಿ...' ಎನ್ನುತ್ತ ಅವನು ಕುಳಿತಂತೆಯೇ ಬಾಗಿ ಬಾಗಿಲು ತೆಗೆದ.

'ಪರವಾಗಿಲ್ಲ ಸರ್. ಅಂಥ ಅರ್ಜೆನ್ಸಿಯೇನೂ ಇಲ್ಲ...' ಗೆಲವು ಕಳೆದುಕೊಂಡ ಅವಳ ದನಿಯನ್ನು ಗುರುತಿಸಿ 'ಪ್ಲೀಸ್ ಬನ್ನಿ ಕವಿತಾ, ರಸ್ತೆಯ ಜನ ನಮ್ಮನ್ನೇ ನೋಡ್ತಿದ್ದಾರೆ' ಎಂದಾಗ ಅವಳು ಕಾರಲ್ಲಿ ಬಂದು ಕುಳಿತಳು. ಅವಳು ಮುಚ್ಚಿದ ಬಾಗಿಲು ಸರಿಯಾಗಿ ಕುಳಿತಿರದ ಕಾರಣ ಅವನು ಬಾಗಿ ಅದನ್ನು ಸರಿಯಾಗಿಸಿದ. ಒಂದು ಕ್ಷಣ ಅವನ ಮುಖ ಅವಳಿಗೆ ತೀರ ಹತ್ತಿರವಾಗಿ ಅವನ ಸುಪುಷ್ಟ ತೋಳು ಅವಳೆದೆಯ ನೇರಕ್ಕೆ ಸಮೀಪವಾಗಿ ಸರಿದಾಗ ಅವಳು ಗಲಿಬಿಲಿಗೊಂಡಳು.

'ಏನು ತುಂಬಾ ಸೀರಿಯಸ್ಸಾಗಿದ್ದೀರಾ. ಕೆಲಸ ಜಾಸ್ತಿಯಿತ್ತೆ?' ಅವಳನ್ನು ಹುರಿದುಂಬಿಸುವ ದನಿಯಲ್ಲಿ ಕೇಳುತ್ತ ಅವನು ಕಾರು ಚಲಾಯಿಸಿದ.

'ಏನಿಲ್ಲ ಸರ್. ಸರಿಯಾಗಿಯೇ ಇದ್ದೇನಲ್ಲ' ಎನ್ನುತ್ತ ಅವಳು ಅವನನ್ನು ನೋಡಿದಳು. ಸಂತೋಷನ ದೃಷ್ಟಿ ದಾರಿಯ ಮೇಲೆ ಕೇಂದ್ರೀಕೃತವಾಗಿತ್ತು. ಕಣ್ಣಕೊನೆಯಿಂದಲೇ ಅವಳನ್ನು ನೋಡಿ ನಸುನಕ್ಕ. ಅವನ ತುಟಿಗಳ ಮೇಲಿನ ಮಂದಹಾಸ ಕಂಡು ಅವಳಲ್ಲಿ ಉತ್ಸಾಹ ಅಂಬೆಗಾಲಿಕ್ಕುತ್ತದೆ. ಚೆಂದುಟಿಗಳ ಮೂತಿಯಲ್ಲಿ ಕಿರುನಗೆಯ ಮಿಂಚು ಮಿನುಗಿ ಮಾಯವಾಗುತ್ತದೆ.

'ನಿಮ್ಮನ್ನು ಅಲ್ಲಿ ನೋಡಿದಾಗಲೇ ತಿಳ್ಕೊಂಡೆ. ಇವತ್ಯಾಕೋ ನೀವು ಒಂಥರಾ ಇದ್ದೀರಾ ಅಂತ, ಮಧ್ಯಾಹ್ನ ನೀವು ಟೀಗೆ ಹೋಗಿರಲಿಲ್ಲವೆಂದು ಮೊದಲೇ ತಿಳಿದಿತ್ತು. ಅದಕ್ಕೆ ನಿಮ್ಮನ್ನು ಮನೆಗೆ ಬಿಟ್ಟು ಹೋದರಾಯ್ತು ಎಂದು ಬಂದೆ.'

ಅವನ ಪಾರ್ಶ್ವಮುಖದ ಚೆಲುವಿಗೆ ಮನಸೋತು, ಬಿಚ್ಚಿ ಅಲ್ಲಾಡುವ ತುಟಿಗಳ ಚಾತುರ್ಯವನ್ನೇ ಪರವಶಳಾಗಿ ನೋಡುತ್ತಿದ್ದ ಕವಿತಾಗೆ ಅವನ ಮಾತು ಕೇಳಿಸಲಿಲ್ಲ.

ಮನೆ ಹತ್ತಿರವಾದಾಗ 'ಬಾಗಿಲಿಗೆ ಬೀಗವಿದೆಯಲ್ಲ. ನಿಮ್ಮನೆಯವರು ಬಂದಂತಿಲ್ಲ...' ಎಂದು ಕೇಳುತ್ತ ಬ್ರೇಕ್ ಒತ್ತಿದ. ಇಂಪಾಲಾ ತೂಗಿ ನಿಂತಿತು.

'ಅವರು ಊರಲ್ಲಿಲ್ಲ. ಬೆಂಗಳೂರಿಗೆ ಹೋಗಿದ್ದಾರೆ. ತುಂಬಾ ಥ್ಯಾಂಕ್ಸ್ ಸರ್' ಎನ್ನುತ್ತ